**ದಿನಾಂಕಃ 23.02.2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎನ್ ಎಸ್ ವಕೀಲರಿಂದಃ-**

ಸರ್ವೆ ನಂ 40 ಒಟ್ಟು 5 ಎಕರೆ 35 ಗುಂಟೆ ಇರುತ್ತದೆ. ನಾನು ಮಾವಿನಕೆರೆಯ ಶಾಲೆಯಲ್ಲಿ ಶಿಕ್ಷಕನಾಗಿರುತ್ತೇನೆ. ನನ್ನದು ಮೂಲತಃ ಬ್ಯಾಲದಾಳು ಗ್ರಾಮ. ದಾವಾ ಸ್ವತ್ತನ್ನು ನಾನೇ ವ್ಯವಸಾಯ ಮಾಡುತ್ತೇನೆ. ವಾರಕ್ಕೆ ಒಮ್ಮೆ ದಾವಾ ಸ್ವತ್ತಿಗೆ ಬರುತ್ತೇನೆ. ಸರ್ವೆ ನಂ 40 ರ ಒಟ್ಟು 5 ಎಕರೆ 35 ಗುಂಟೆಯನ್ನು ನಾನು ಅಳತೆ ಮಾಡಿಸಿರುವುದಿಲ್ಲ ಸಾಕ್ಷಿ ಮುಂದುವರೆದು ನನ್ನ ಸ್ವತ್ತನ್ನು ಅಳತೆ ಮಾಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಸ್ವತ್ತಿನ ಸುತ್ತಾ ಸದರಿ ಸರ್ವೆ ನಂಬರಿನ ಉಳಿಕೆ ಜಮೀನು ಇದೆ. ನನ್ನ ಸ್ವತ್ತಿನ ಸುತ್ತಾ ಇರುವ ಸ್ವತ್ತುಗಳನ್ನೂ ಸಹ ಅಳತೆ ಮಾಡಲಾಗಿದೆ. ಸ್ವತ್ತನ್ನು ಅಳೆತ ಮಾಡಿಸಿರುವ ಬಗ್ಗೆ ದಾಖಲೆ ಹಾಜರುಪಡಿಸಿರುತ್ತೇನೆ. ನನ್ನ ಸ್ವತ್ತಿನ ಪೂರ್ವಕ್ಕೆ : ಈರಮ್ಮ ಮತ್ತು ಪುಟ್ಟರಾಜು ರವರ ಸ್ವತ್ತು, ಪಶ್ಚಿಮಕ್ಕೆ : ಪ್ರತಿವಾದಿ ಈರಮ್ಮ, ದಕ್ಷಿಣಕ್ಕೆ : ಬಾಣಾವರದ ರಸ್ತೆ, ಉತ್ತರಕ್ಕೆ : ಸರ್ವೆ ನಂ 41. ನನ್ನ ಸ್ವತ್ತಿನ ಸುತ್ತಾ ಬೇಲಿ ಇಲ್ಲಾ. ನನ್ನ ಸ್ವತ್ತಿನ ಯಾವುದೇ ಭಾಗದಲ್ಲಿ ಬೇಲಿ ಇಲ್ಲಾ.

ಸಾಕ್ಷಿಗೆ ಈಗ ಒಂದು ಛಾಯಾಚಿತ್ರ ತೋರಿಸಲಾಗಿ ಅದನ್ನು ಒಪ್ಪಿದ್ದರಿಂದ ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿಗೆ ಮತ್ತೊಂದು ಛಾಯಾಚಿತ್ರವನ್ನು ತೋರಿಸಲಾಗಿ ಅದರಲ್ಲಿ ಕಾಣುವ ಬೋರ್ ವೆಲ್ ಮತ್ತು ಕಬ್ಬು ಬೆಳೆದ ಜಾಗ ನನಗೆ ಸಂಬಂಧಿಸಿದ ಜಾಗ ಆದರೆ ಪ್ರತಿವಾದಿ ಅದನ್ನು ಒತ್ತುವರಿ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಛಾಯಾಚಿತ್ರವನ್ನು ನಿಡಿ-2 ಎಂದು ಗುರುತಿಸಲಾಯಿತು. ನಿಡಿ-2 ರಲ್ಲಿ ತೆಂಗಿನ ಸಸಿಗಳು ಇದೆ ಎಂದರೆ ಸರಿ, ಸಾಕ್ಷಿ ಅದನ್ನು ಕೋವಿಡ್ ಸಮಯದಲ್ಲಿ ಹಾಕಿದ್ದ ಗಿಡಗಳು ಎನ್ನುತ್ತಾರೆ. ನಿಡಿ-2 ರಲ್ಲಿ ಕಾಣುವ ಛಾಯಾಚಿತ್ರದಲ್ಲಿ ಇರುವ ಬೋರ್ ಮೆಲ್ 10 ವರ್ಷದ ಹಳೆಯದ್ದು ಎಂದರೆ ಸಾಕ್ಷಿಯ ಕೋವಿಡ್ ಸಮಯದಲ್ಲಿ ಹಾಕಿಸಿರಬಹುದು ಎನ್ನುತ್ತಾರೆ.

ನನ್ನ ಮತ್ತು ಪ್ರತಿವಾದಿಯ ಸ್ವತ್ತಿನ ನಡುವೆ ಬೇಲಿ ಇದೆ ಎಂದರೆ ಸಾಕ್ಷಿಯು ಅಳತೆ ಮಾಡಲು ಬಂದಾಗ ಬೇಲಿಯನ್ನು ತೆಗೆಯಲು ತಿಳಿಸಿದೆವು ಆದರೆ ಅವರು ಬೇಲಿಯನ್ನು ತೆಗೆಯಲಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಗಡಿಕಲ್ಲನ್ನೂ ಸಹ ಕಿತ್ತು ಹಾಕಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಹದ್ದುಬಸ್ತನ್ನು 2021 ರಲ್ಲಿ ಮಾಡಿಸಿರುತ್ತೇನೆ. ಸಾಕ್ಷಿಗೆ ಈಗ ಸರ್ವೆ ಇಲಾಖೆಯವರು ನೀಡಿದ ನೋಟಿಸ್, ವರದಿ ಮತ್ತು ನಕ್ಷೆ ಹಾಗೂ ಇತರೇ ದಾಖಲೆಗಳನ್ನು ತೋರಿಸಲಾಗಿ ಅದನ್ನು ಒಪ್ಪಿದ್ದರಿಂದ ಒಟ್ಟಾಗಿ ಅವುಗಳನ್ನು ನಿಡಿ-3 ಎಂದು

ಗುರುತಿಸಲಾಯಿತು. ನಿಡಿ-3 ನಾನು ನೀಡಿದ ಅರ್ಜಿಯ ಮೇರೆಗೆ ಸರ್ವೆ ಇಲಾಖೆಯವರು ಬಂದು ಪ್ರತಿವಾದಿ ಸಮಕ್ಷಮ ಮಾಡಿದ ಸರ್ವೆ ವರದಿ ಎಂದರೆ ಸರಿ. ನಿಡಿ-3 ರಲ್ಲಿ ಒತ್ತುವರಿ ಬಗ್ಗೆ ನಮೂದು ಇಲ್ಲಾ ಎಂದರೆ ಸಾಕ್ಷಿಯು ನಮಗೆ ಹದ್ದು ಬಸ್ತು ಪೋಡಿನಲ್ಲಿ ಆ ಬಗ್ಗೆ ಗೊತ್ತಾಯಿತು ಎಂದು ನುಡಿಯುತ್ತಾರೆ.

ತಾತ್ಕಾಲ್ ಪೋಡು ಮಾಡುವಾಗ ಒಂದು ಗುಂಟೆ ವ್ಯತ್ಯಾಸವಾದರೂ ತಾತ್ಕಾಲ್ ಪೋಡು ಮಾಡಲು ಅವಕಾಶವಿಲ್ಲ ಎಂಬ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ, ಸಾಕ್ಷಿ ಮುಂದುವರೆದು ತಾತ್ಕಾಲ್ ಪೋಡು ಮಾಡಿದ ನಂತರ ಹದ್ದು ಬಸ್ತು ಪೋಡು ಮಾಡಿಸಿದ್ದೇನೆ ಹಾಗೂ ಆ ದಾಖಲೆ ನ್ಯಾಯಾಲಯಕ್ಕೆ ನೀಡಿದ್ದೇನೆ ಎಂದು ನುಡಿಯುತ್ತಾರೆ. ನಿಪಿ-6 ರ ಪ್ರಕಾರ ಸರ್ವೆ ನಂ 40:2 ರವರು ಒತ್ತುವರಿ ಮಾಡಿದ್ದಾರೆ ಎಂದು ತೋರಿಸಿದ್ದಾರೆ. ನಿಪಿ-6 ರಲ್ಲಿ ಸರ್ವೆ ನಂ 40 ರ ಉಳಿದ ಸ್ವತ್ತಿನ ಬಗ್ಗೆ ನಮೂದು ಇರುವುದಿಲ್ಲ. ನಿಪಿ-6 ರಲ್ಲಿ ಇಂತಹ ವ್ಯಕ್ತಿಯು ಒತ್ತುವರಿ ಮಾಡಿದ್ದಾರೆ ಎಂದು ನಮೂದಿಸಿಲ್ಲ ಎಂದರೆ ಸಾಕ್ಷಿಯು ಆನ್ ಲೈನಿನಲ್ಲಿ ನಮೂದು ಮಾಡಿದ್ದಾರೆ ಎಂದು ನುಡಿಯುತ್ತಾರೆ. ನಿಪಿ-6 ನ್ನು ನಾನು ಉದ್ದೇಶಪೂರ್ವಕವಾಗಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ.

ಹದ್ದುಬಸ್ತು ನಕ್ಷೆ ಪ್ರತಿವಾದಿಯ ಸಮಕ್ಷಮ ಆದ ಬಗ್ಗೆ ನಮೂದು ಇಲ್ಲಾ ಎಂದರೆ ಸಾಕ್ಷಿಯು ಅವರು ಖುದ್ದು ಹಾಜರು ಇದ್ದರು ಅವರಿಗೆ ನಾನೇ ಪ್ರತಿಯನ್ನು ನೀಡಿದ್ದೇನೆ ಎಂದು ನುಡಿಯುತ್ತಾರೆ. ಪ್ರತಿವಾದಿಗೆ ಆ ಸಮಯದಲ್ಲಿ ನೀಡಿದ ನೋಟಿಸ್ ದಾಖಲೆಯಲ್ಲಿ ಇರುವುದಿಲ್ಲ. ನಿಪಿ-4 ಮತ್ತು 5 ನಿಪಿ-6 ಕ್ಕೆ ಹೊಂದಾಣಿಕೆ ಆಗುತ್ತಿಲ್ಲ ಎಂದರೆ ನನಗೆ ಆ ಬಗ್ಗೆ ನನಗೆ ಮಾಹಿತಿ ಇಲ್ಲಾ ಎಂದು ನುಡಿಯುತ್ತಾರೆ. ಸರ್ವೆ ಇಲಾಖೆಯವರೊಂದಿಗೆ ಶರೀಖಾಗಿ ನಿಪಿ-6 ನ್ನು ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ನಿಪಿ-6 ರಲ್ಲಿ ಸಹಿ ಇಲ್ಲಾ ಎಂದರೆ ಸರಿಯಲ್ಲ. ಸರ್ವೆಯರ್ ಯಶೋಧ ರವರ ಸಹಿ ನಿಪಿ-6 ರಲ್ಲಿ ಇರುವುದಿಲ್ಲ. ನನಗೆ ಡಿ ಡಿ ಎಲ್ ಆರ್ ಕಛೇರಿಯಿಂದ ನೋಟಿಸು ಬಂದಿರುವುದಿಲ್ಲ. ನಿಪಿ-6 ನ್ನು ಸೃಷ್ಟಿಸಲಾಗಿದೆ ಎಂದು ಪ್ರತಿವಾದಿಯು ಡಿ ಡಿ ಎಲ್ ಆರ್ ಕಛೇರಿಯಲ್ಲಿ ಸದರಿ ನಕ್ಷೆಯನ್ನು ಪ್ರಶ್ನಿಸಿದ್ದಾರೆ ಎಂಬ ಬಗ್ಗೆ ನನಗೆ ತಿಳಿದಿರುವುದಿಲ್ಲ.

( ಮುಂದುವರೆದ ಪಾಟೀ ಸವಾಲಿಗಾಗಿ ಸಮಯಕೋರಿದ್ದರಿಂದ ಮುಂದೂಡಲಾಯಿತು )

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

Sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು, ಕಡೂರು.